**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**
**ಸವಣೂರ**

**ದಿನಾಂಕ 3 ನೇ ಆಗಸ್ಟ್ , 2026**

**ಉಪಸ್ಥಿತರು**

**ಶ್ರೀ ಶ್ರೀನಿವಾಸ ಎಸ್.ಎನ್.**
**ಬಿ.ಎ., ಎಲ್.ಎಲ್. ಎಂ.,**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಗಳು**
**ಸವಣೂರ**

**ಸಿ . ಸಿ. ನಂ. 800/2022**

**ಫಿರ್ಯಾದುದಾರರು** : ರಾಜ್ಯದ ಪರವಾಗಿ ಪೊಲೀಸ್ ಇನ್ಸಪೆಕ್ಟರ್,
ಸವಣೂರ ಪಿ.ಎಸ್
[ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು]

ವಿರುದ್ಧ

**ಆರೋಪಿ :** ಬಸವರಾಜ ತಂದೆ ಅಂದಾನೆಪ್ಪಾ ಜಾನೋಪಂತರ
ವಯಸ್ಸು : 34 ವರ್ಷ, ಉ : ವ್ಯವಸಾಯ
ವಾಸಃ ಲಿಂಗದಾಳ ಗ್ರಾಮ,
ತಾಃ ಗದಗ, ಜಿಃ ಗದಗ
[ಪರವಾಗಿ ಶ್ರೀ ವಿ.ಬಿ. ತುರಕಾಣಿ, ವಕೀಲರು]

| | |
|---|---|
| ಕೃತ್ಯ ನಡೆದ ದಿನ | 10-01-2022 |
| ಪ್ರಕರಣ ದಾಖಲಾದ ದಿನಾಂಕ | 10-01-2022 |
| ಪ್ರಕರಣದ ಸ್ವರೂಪ | ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.279, 304(ಎ) ರಡಿಯಲ್ಲಿ. |
| ವಿಚಾರಣೆ ಪ್ರಾರಂಭವಾದ ದಿನಾಂಕ | 09-07-2024 |

| | |
|---|---|
| ವಿಚಾರಣೆ ಮುಕ್ತಾಯವಾದ ದಿನಾಂಕ | 09-03-2026 |
| ತೀರ್ಪು ನೀಡಿದ ದಿನಾಂಕ | 03-08-2026 |
| ಪ್ರಕರಣದ ಒಟ್ಟು ಕಾಲಾವಧಿ | ವರ್ಷ ತಿಂಗಳು ದಿನ<br>07 01 07 |

## ತೀರ್ಪು

ಪೊಲೀಸ್ ಇನ್ಸಪೆಕ್ಟರ್, ಸವಣೂರ ಪೊಲೀಸ್ ಠಾಣೆ ಇವರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.279, 304(ಎ) ರಡಿಯಲ್ಲಿ ದೋಷರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತದೆ :**

ದಿನಾಂಕ: 10-01-2022 ರಂದು ಬೆಳಗಿನ ಜಾವ 02-30 ಗಂಟೆಯ ಸುಮಾರಿಗೆ, ಸವಣೂರ-ಲಕ್ಷ್ಮೇಶ್ವರ ಮುಖ್ಯ ರಸ್ತೆಯಲ್ಲಿರುವ ಅಲ್ಲಿಪೂರ ಗ್ರಾಮದಿಂದಾ ಸವಣೂರ ಕಡೆಗೆ ಸುಮಾರು 200 ಮೀಟರ ಅಂತರದಲಿರುವ ಜಾಫರಸಾಬ ತಂದೆ ಅಲ್ಲಾಭಕ್ಷ ಚೋಪದಾರ ಇವರಿಗೆ ಸೇರಿದ ಜಮೀನಿನ ಹತ್ತಿರ ಹಾಯ್ದು ಹೋಗಿರುವ ಸವಣೂರ-ಲಕ್ಷ್ಮೇಶ್ವರ ಮುಖ್ಯ ರಸ್ತೆಯ ಟಾರ್ ರಸ್ತೆಯ ಮೇಲೆ ಆರೋಪಿ ನಡೆಸುತ್ತಿದ ಮಹಿಂದ್ರಾ 475 ಡಿ,ಐ ಕಂಪನಿಯ ಟ್ರಾಕ್ಟರ್ ಇಂಜಿನ್, ನಂ. ಏಂ-33-ಬಿ-2492 ಮತ್ತು ಟ್ರಾಕ್ಟರ ಟ್ರೇಲರ್ ನಂ. ಸಿ.ಟಿ.ಡಬ್ಲೂ-9573 ರಲ್ಲಿ ಒಣ ಮೆಣಸಿನಕಾಯಿ ಲೋಡ್ ಮಾಡಿಕೊಂಡು ಅದರ ಮೇಲೆ ಫಿರ್ಯಾದಿ ಮತ್ತು ಗಾಯಾಳು ಮುತ್ತಪ್ಪ ತಂದೆ ವೀರಪ್ಪ ಉಳ್ಳಾಗಡ್ಡಿ ಇವರಿಬ್ಬರಿಗೂ ಕೂರಿಸಿಕೊಂಡು ಯಲವಿಗಿ ಗ್ರಾಮದ ಕಡೆಯಿಂದಾ ಸವಣೂರ ಕಡೆಗೆ ಅತೀ ಜೋರಾಗಿ ವ ನಿರ್ಲಕ್ಷತನದಿಂದಾ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದವನೆ ಅಲ್ಲಿಪೂರ ಗ್ರಾಮ ದಾಟಿ ಸವಣೂರ ಕಡೆಗೆ ಸುಮಾರು 200 ಮೀಟರ ಅಂತರದಲ್ಲಿರುವ ಜಾಫರಸಾಬ ತಂದೆ ಅಲಾಭಕ್ಷ ಚೋಪದಾರ ಇವರಿಗೆ ಸೇರಿದ ಜಮೀನಿನ ಹತ್ತಿರ ಟಾರ ರಸ್ತೆಯಲ್ಲಿರುವ ತೆಗ್ಗಿನಲ್ಲಿ

ಟ್ರಾಕ್ಟರ್ ಟ್ರೇಲರದ ಎಡಗಡೆಗೆ ಗಾಲಿಯನ್ನು ಕೆಡವಿ, ಟ್ರಾಕ್ಟರ ಇಂಜಿನ್ನಿಂದಾ ಟ್ರಾಕ್ಟರ್ ಟ್ರೇಲರಿಗೆ ಜೋಡಿಸುವ ಹುಕ್ಕಾ ಕಟ್ಟಾಗುವಂತೆ ಮಾಡಿ, ಟ್ರಾಕ್ಟರ್ ಟ್ರೇಲರನ್ನು ಎಡಹೋಳು ಮಗ್ಗಲಾಗಿ ಪಲ್ಟಿ ಮಾಡಿದಾಗ ಟ್ರೇಲರ ಇನ್ನೊಂದು ಪಲ್ಟಿಯಾಗಿ ರಸ್ತೆಯ ಪಕ್ಕದಲ್ಲಿರುವ ತೆಗ್ಗಿನಲ್ಲಿ ಡಬ್ಬಾಗಿ ಪಲ್ಟಿ ಮಾಡಿ ಅಪಘಾತ ಪಡಿಸಿ, ಟ್ರೇಲರದ ಮೆಣಸಿನಕಾಯಿ ಲೋಡ್ ಮೇಲೆ ಕುಳಿತ ಫಿರ್ಯಾದಿದಾರರಿಗೆ ಟ್ರೇಲರದಿಂದಾ ಹೊರಗೆ ಪುಟಿದು ಬೀಳುವಂತೆ ಮಾಡಿದ್ದಲ್ಲದೆ, ಮುತ್ತಪ್ಪ ತಂದೆ ವೀರಪ್ಪ ಉಳ್ಳಾಗಡ್ಡಿ ಈತನಿಗೆ ಟ್ರೇಲರ ಕೆಳಗಡೆ ಸಿಕ್ಕಿಕೊಳ್ಳುವಂತೆ ಮಾಡಿ ಅವನ ಎದೆಯ ಎಡಭಾಗದಲ್ಲಿ, ಎಡಗೈ ಮುಂಗೈ ಮೇಲೆ ತೆರಚಿದ ಗಾಯ ಮತ್ತು ಬೆನ್ನಿಗೆ ಅಲ್ಲಲ್ಲಿ ಒತ್ತಿದ ಮರಣಾಂತಿಕ ಗಾಯ ಪಡಿಸಿ, ನಂತರ ಮುತ್ತಪ್ಪನಿಗೆ ಉಪಚಾರಕ್ಕೆ ಸವಣೂರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿ ಮಧ್ಯದಲ್ಲಿ ದಿನಾಂಕ: 10-01-2022 ರಂದು ಬೆಳಗಿನ ಜಾವ 03-00 ಗಂಟೆಯ ಸುಮಾರಿಗೆ ಮರಣ ಹೊಂದುವಂತೆ ಮಾಡಿರುತ್ತಾರೆ.

ನಂತರ ಚಾಸಾ-1 ರವರು ಸಲ್ಲಿಸಿದ ದೂರಿನ ಆಧಾರದಲ್ಲಿ ಸವಣೂರ ಪೋಲೀಸರು ತಮ್ಮ ಠಾಣಾ ಕ್ರೈಂ ನಂ.01/20 ರಲ್ಲಿ ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.279, 337, 304(ಎ) ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**3.** ತನಿಖಾಧಿಕಾರಿಯು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.279, 304(ಎ) ರಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಆರೋಪಿ ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಅಂತಿಮ ವರದಿಯ ಪ್ರತಿಯನ್ನು ನೀಡಲಾಗಿರುತ್ತದೆ. ನ್ಯಾಯಾಲಯವು ಆರೋಪಿ ವಿರುದ್ಧ ದೋಷರೋಪಣೆಯನ್ನು ಸಿದ್ಧಪಡಿಸಿ ಅವನಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ

ಆರೋಪಿ ಆರೋಪಣೆಯನ್ನು ಅಲ್ಲಗಳೆದಿರುತ್ತಾರೆ. ನ್ಯಾಯಾಲಯವು ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆಗಾಗಿ ಸಮನ್ಸನ್ನು ಹೊರಡಿಸಿರುತ್ತದೆ.

**4.** ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು ಫಿರ್ಯಾದುದಾರರಾದ ಪ್ರಾಸಾ-1 ರಿಂದ 9 ರವರನ್ನು ವಿಚಾರಣೆ ಮಾಡಿ ನಿಪಿ-1 ರಿಂದ 18 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಕೋರಿಕೆ ಮೇರೆಗೆ ಚಾಸಾ-7, 8 ಮತ್ತು 11 ರವರನ್ನು ವಿಚಾರಣೆಯಿಂದ ಕೈಬಿಡಲಾಗಿದೆ. ಅಭಿಯೋಜನೆಯು ಚಾಸಾ-13 ರವರ ಸಾಕ್ಷಿ ಮಾಡಿಸಲು ವಿಫಲವಾಗಿದ್ದರಿಂದ, ಅವರನ್ನು ವಿಚಾರಣೆಯಿಂದ ಕೈಬಿಡಲಾಗಿದೆ.

**5.** ದಂಡ ಪ್ರಕ್ರಿಯೆ ಸಂಹಿತೆಯ ಕಲಂ.313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ರಚಿಸಿ, ಓದಿ ತಿಳಿಸಲಾಯಿತು. ಆರೋಪಿಯು ತನ್ನ ವಿರುದ್ಧ ಸಾಕ್ಷಿಯನ್ನು ಅಲ್ಲಗಳೆದು ತನ್ನ ಪರವಾಗಿ ಯಾವುದೇ ವಿಚಾರಣೆ ಸಾಕ್ಷಿ ಇಲ್ಲ ಎಂದು ತಿಳಿಸಿರುತ್ತಾರೆ.

**6.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

**7.** ಈ ಮೇಲೆ ಹೇಳಿದ ಪ್ರಕರಣದ ವಸ್ತುಸ್ಥಿತಿಯ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ನಿರ್ಧರಿಸಬೇಕಾಗಿರುತ್ತದೆಃ

(1). ಆರೋಪಿ ದಿನಾಂಕ : 10.01.2022 ರಂದು ಬೆಳಗಿನ ಜಾವ 2.30 ಗಂಟೆ ಸುಮಾರಿಗೆ ಮಹಿಂದ್ರಾ ಟ್ರಾಕ್ಟರ ಇಂಜಿನ ನಂ.ಎಂ.33/ಖಿ-2492 ಮತ್ತು ಟ್ರೇಲರ ನಂಬರ ಸಿ.ಟಿ.ಡಬ್ಲೂ-9573 ನೇದ್ದರಲ್ಲಿ ಒಣ ಮೆಣಸಿನಕಾಯಿ ಲೋಡ್ ಮಾಡಿಕೊಂಡು ಅದರ ಮೇಲೆ ಪಿರ್ಯಾದುದಾರ ಸುನಿಲ ಮತ್ತು ಮುತ್ತಪ್ಪ ಉಳ್ಳಾಗಡ್ಡಿ ಇವರನ್ನು ಕೂಡ್ರಿಸಿಕೊಂಡು ಯಲವಿಗಿ ಗ್ರಾಮದ ಕಡೆಯಿಂದಾ ಸವಣೂರ ಕಡೆಗೆ ಅತಿ ಜೋರಾಗಿ ವ ನಿರ್ಲಕ್ಷ್ಯತನದಿಂದ

ಅಲಾಯಿಸಿಕೊಂಡು ಬಂದವನೆ ಅಲ್ಲಿಪೂರ ಗ್ರಾಮ ದಾಟಿ ಸವಣೂರ ಕಡೆಗೆ ಸುಮಾರು 200 ಮೀಟರ ಅಂತರದಲ್ಲಿ ಜಾಫರಸಾಬ ತಂದೆ ಅಲ್ಲಾಭಕ್ಷ ಚೋಪದಾರ ಇವರಗೆ ಸೇರಿದ ಜಮೀನಿನ ಹತ್ತಿರ ಟಾರ ರಸ್ತೆಯ ತೆಗ್ಗಿನಲ್ಲಿ ಟ್ರಾಕ್ಟರ ಟ್ರೇಲರದ ಎಡಗಡೆ ಗಾಲಿಯನ್ನು ಕೆಡವಿ ಇಂಜಿನಿಂದ ಟ್ರಾಕ್ಟರ ಟ್ರೇಲರಿಗೆ ಜೋಡಿಸುವ ಹುಕ್ಕಾ ಕಟ್ಟಾಗುವಂತೆ ಮಾಡಿ ಟ್ರೇಲರನ್ನು ಡಬ್ಬಾಗಿ ಪಲ್ಟಿಯಾಗುವಂತೆ ಮಾಡಿ ಅಪಘಾತ ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

(2). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ಮಹಿಂದ್ರಾ ಟ್ರಾಕ್ಟರ ಇಂಜಿನ ನಂ.ಎಂ.33/ಖಿ-2492 ಮತ್ತು ಟ್ರೇಲರ ನಂಬರ ಸಿ.ಟಿ.ಡಬ್ಲೂ-9573 ನೇದ್ದನ್ನು ಅಲ್ಲಿಪೂರ ಗ್ರಾಮ ದಾಟಿ ಸವಣೂರ ಕಡೆಗೆ ಸುಮಾರು 200 ಮೀಟರ ಅಂತರದಲ್ಲಿ ಜಾಫರಸಾಬ ತಂದೆ ಅಲ್ಲಾಭಕ್ಷ ಚೋಪದಾರ ಇವರಗೆ ಸೇರಿದ ಜಮೀನಿನ ಹತ್ತಿರ ಟಾರ ರಸ್ತೆಯ ತೆಗ್ಗಿನಲ್ಲಿ ಟ್ರಾಕ್ಟರ ಟ್ರೇಲರದ ಎಡಗಡೆ ಗಾಲಿಯನ್ನು ಕೆಡವಿ ಇಂಜಿನಿಂದ ಟ್ರಾಕ್ಟರ ಟ್ರೇಲರಿಗೆ ಜೋಡಿಸುವ ಹುಕ್ಕಾ ಕಟ್ಟಾಗುವಂತೆ ಮಾಡಿ ಟ್ರೇಲರನ್ನು ಡಬ್ಬಾಗಿ ಪಲ್ಟಿಯಾಗುವಂತೆ ಮಾಡಿ ಟ್ರೇಲರದ ಮೆಣಸಿನಕಾಯಿ ಲೋಡ ಮೇಲೆ ಕುಳಿತ ಸುನಿಲ ಮತ್ತು ಮುತ್ತಪ್ಪ ಉಳ್ಳಾಗಡ್ಡಿ ಈತನಿಗೆ ಟ್ರೆಲರ ಕೆಳಗೆ ಸಕ್ಕಿಕೊಳ್ಳುವಂತೆ ಮಾಡಿ ಅವನ ಎದೆಯ ಎಡಬಾಗದಲ್ಲಿ, ಎಡಗೈ ಮುಂಗೈ ಮೇಲೆ ಮತ್ತು ಬೆನ್ನಿಗೆ ಮರಣಾಂತಿಕ ಗಾಯ ಪಡಿಸಿ ಉಪಚಾರಕ್ಕೆ ಸವಣೂರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಿನಾಂಕ : 10.01.2022 ರಂದು ಬೆಳಗಿನ ಜಾವ 3.00 ಗಂಟೆಗೆ ಮರಣ ಹೊಂದುವಂತೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

(3) ಏನು ಆದೇಶ?

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ಸಂಖ್ಯೆ :1: ನಕಾರಾತ್ಮಕವಾಗಿ.

ಅಂಶ ಸಂಖ್ಯೆ :2: ನಕಾರಾತ್ಮಕವಾಗಿ.

ಅಂಶ ಸಂಖ್ಯೆ :3: ಅಂತಿಮ ಆದೇಶದ ಪ್ರಕಾರ ಈ ಕೆಳಕಂಡ ಕಾರಣಗಳಿಗಾಗಿ;-

- : **ಕಾರಣಗಳು** :-

**9. ಅಂಶ ಸಂಖ್ಯೆ :-1 ಮತ್ತು 2** : - ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾದ ಕಾರಣ ಹಾಗೂ ವಸ್ತು ಸಂಗತಿಗಳು ಪುನರಾವರ್ತನೆಯಾಗುವುದನ್ನು ತಪ್ಪಿಸಲು, ಸದರಿ ಈ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

**10.** ಅಭಿಯೋಜನೆಯು ದೂರುದಾರರಾದ ಚಾಸಾ-1/ಸುನೀಲ ನಾಗಾವಿ ಇವರನ್ನು ಪ್ರಾಸಾ-1 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ಮತ್ತು ಮೃತ ಮುತ್ತಪ್ಪ ಉಳ್ಳಾಗಡ್ಡಿ ಹಾಗೂ ಗಾಡಿಯ ಚಾಲಕರವರು ಒಣ ಮೆಣಸಿನಕಾಯಿಯನ್ನು ಲೋಡ್ ಮಾಡಿಕೊಂಡು ಲಿಂಗದಾಳದಿಂದ ಬ್ಯಾಡಗಿಗೆ ಮಹಿಂದ್ರಾ ಟ್ರ್ಯಾಕ್ಟರ್ ರಲ್ಲಿ ಬಸವರಾಜರವರು ಓಡಿಸಿಕೊಂಡು ಹೋಗುತ್ತಿದ್ದೆವು. ತಾನು ಮತ್ತು ಮುತ್ತಪ್ಪ ಉಳ್ಳಾಗಡ್ಡಿರವರು ಮೆಣಸಿನಕಾಯಿ ಲೋಡ್ ಮಾಡಿದ ಮೂಟೆಗಳ ಮೇಲೆ ಕುಳಿತುಕೊಂಡಿದ್ದೆವು.

ತಾವು ರಾತ್ರಿ ಸುಮಾರು 12.00 ಗಂಟೆ ಹೋಗಬೇಕಾದರೆ ನಮ್ಮ ಟ್ರ್ಯಾಕ್ಟರ್ ನ ಗುಂಡಿಗೆ ಗಾಡಿಯ ಚಕ್ರ ಹೋಗಿ, ಹುಕ್ ಕಟ್ ಆಗಿ ಟ್ರೇಲರ್ ಪಲ್ಟಿಯಾಗಿರುತ್ತದೆ. ಆ ವೇಳೆಯಲ್ಲಿ ತಾನು ಗಿಡವನ್ನು ಹಿಡಿದುಕೊಂಡು ಪಾರಾದೆ. ಆಗ ಮೃತ ಮುತ್ತಪ್ಪ ಉಳ್ಳಾಗಡ್ಡಿಯವರು ಟ್ರೇಲರ್ ನ ಕೆಳಗಡೆ ಸಿಕ್ಕಿಕೊಂಡಿದ್ದನು. ನಂತರ ಜೆ.ಸಿ.ಬಿ ಯಿಂದ ಟ್ರೇಲರ್ ಅನ್ನು ಎತ್ತಿ ಮುತ್ತಪ್ಪನನ್ನು ಹೊರಗೆ ತೆಗೆದೆವು. ಆ ವೇಳೆಯಲ್ಲಿ ಮುತ್ತಪ್ಪನು ಸ್ವಲ್ಪ ಸ್ವಲ್ಪ ಮಾತಾಡುತ್ತಿದ್ದರು, ನಂತರ ತಾನು ಮತ್ತು ಬಸವರಾಜರವರು ಅವರನ್ನು ಟಾಟಾ ಏಸಿ

ಗಾಡಿಯಲ್ಲಿ ಸವಣೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ನಂತರ ಮುತ್ತಪ್ಪನು ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾನೆ.

ಟ್ರಾಕ್ಟರ್ ನ ನೊಂದಣಿ ಸಂಖ್ಯೆ ಹೇಳಲು ಆಗುವುದಿಲ್ಲ ಮತ್ತು ಯಾರ ತಪ್ಪಿನಿಂದ ಈ ಅಪಘಾತವಾಗಿದೆ ಎಂದು ತನಗೆ ಹೇಳಲು ಆಗುವುದಿಲ್ಲ. ಟ್ರಾಕ್ಟರ್ ನ ಹುಕ್ಕು ಕಟ್ ಆಗಿದ್ದರಿಂದ ಈ ಅಪಘಾತ ಸಂಭವಿಸಿರುತ್ತದೆ. ಈ ವಿಷಯವಾಗಿ ತಾನು ಪೊಲೀಸರಿಗೆ ನಿಪಿ-1 ದೂರನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ತನ್ನ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ಮರುದಿನ ಚಾಸಾ-2 ಮತ್ತು 3 ರವರ ಸಮಕ್ಷಮ ತಾನು ತೋರಿಸಿದ ಜಾಗೆಯಲ್ಲಿ ಪೊಲೀಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ. ಅದರಲ್ಲಿ ತನ್ನ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಎರಡು ಭಾವಚಿತ್ರಗಳನ್ನು ಸಹ ತೆಗೆದಿರುತ್ತಾರೆ. ಭಾವಚಿತ್ರಗಳಲ್ಲಿ ತಾನು ಇರುತ್ತೇನೆ. ಪಂಚನಾಮೆಯ ವೇಳೆಯಲ್ಲಿ ತೆಗೆದ ಭಾವಚಿತ್ರಗಳಲ್ಲಿ ಸಾಕ್ಷಿಯು ಹಾಜರಿದ್ದು, ತಾನು ಇರುವುದನ್ನು ಗುರುತಿಸಿರುತ್ತಾರೆ, ಸದರಿ ಭಾವಚಿತ್ರಗಳನ್ನು ನಿಪಿ 3 ರಿಂದ ನಿಪಿ 7 ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ತನಗೆ ಮಾಹಿತಿ ಇರುವುದಿಲ್ಲ. ಪೊಲೀಸರು ಸಹಿ ಮಾಡು ಎಂದಿದ್ದಕ್ಕೆ ತಾನು ಸಹಿ ಮಾಡಿರುತ್ತೇನೆ ಎಂದು  ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

ನಂತರ ಪ್ರಾಸಾ-1 ರವರು ಅಭಿಯೋಜನೆಯ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನಾ ಪರವಾಗಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನೀಡಿದ್ದರೂ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಪಾಟೀ ಸವಾಲಿನಲ್ಲಿ ಮತ್ತು ಆರೋಪಿತರ ಪರ ಪಾಟೀ ಸವಾಲಿನಲ್ಲಿ ತಮ್ಮ ಹಿಂದಿನ ಹೇಳಿಕೆಯನ್ನು ಬೆಂಬಲಿಸದೆ ಅಭಿಯೋಜನಾ ಪ್ರಕರಣಕ್ಕೆ ವಿರುದ್ಧವಾಗಿ ಉತ್ತರಿಸಿದ್ದಾರೆ.

**11.** ಅಭಿಯೋಜನೆಯು ಸಾಕ್ಷಿದಾರರಾದ ಚಾಸಾ-2/ಚನ್ನಬಸನಗೌಡ ಹೊಸಮನಿ ಇವರನ್ನು ಪ್ರಾಸಾ-2 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ನಿಪಿ-

2 ಪಂಚನಾಮೆಯಾಗಿದ್ದು, ಅದರಲ್ಲಿ ತನ್ನ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು, ಮತ್ತು ನಿಪಿ-3 ರಿಂದ 7 ಪಂಚನಾಮೆಯ ವೇಳೆಯಲ್ಲಿ ತೆಗೆದಿರುವ ಭಾವಚಿತ್ರಗಳಲ್ಲಿ ತಾನು ಇರುತ್ತೇನೆ. ಸದರಿ ಸಹಿಯನ್ನು ಮೃತ ಮುತ್ತಪ್ಪನಿಗೆ ಅಪಘಾತವಾಗಿರುವುದರ ಬಗ್ಗೆ ಮಾಡಿರುತ್ತೇನೆ, ಸದರಿ ಸಹಿಯನ್ನು ಸುಮಾರು ಎರಡು ವರ್ಷದ ಹಿಂದೆ ಮಾಡಿರುತ್ತೇನೆ. ಸದರಿ ಭಾವಚಿತ್ರಗಳನ್ನು ಟ್ರೇಲರ್ ಪಲ್ಟಿಯಾದ ಜಾಗದಲ್ಲಿ ತೆಗೆದಿರುತ್ತಾರೆ. ನಂತರ ಘಟನಾ ಸ್ಥಳದಿಂದ ಟ್ರ್ಯಕ್ಟರ್ ಮತ್ತು ಟ್ರೇಲರನ್ನು ಪೊಲೀಸರು ಜಪ್ತು ಮಾಡಿಕೊಂಡು ಸವಣೂರು ಪೊಲೀಸ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

ನಂತರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ರವರಿಂದ ಪಾಟೀ ಸವಾಲಿಗೆ ಒಳಪಟ್ಟಾಗ, ದಿಃ10-01-2022 ರಂದು ಮಧ್ಯಾಹ್ನ 14.30 ಗಂಟೆಯಿಂದ 15.30 ಗಂಟೆಯವರೆಗೆ ನಿಮ್ಮ ಮತ್ತು ಚಾಸಾ 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಜಾಗೆಯಲ್ಲಿ ಪೊಲೀಸರು ನಿಪಿ 2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆಯ ವೇಳೆಯಲ್ಲಿ ಅಪಘಾತಕ್ಕೆ ಒಳಗಾದ ಟ್ರಾಕ್ಟರ ನೊಂದಣಿ ಸಂಖ್ಯೆ ಕೆ ಎ 33 ಟಿ 2492 ಟ್ರೇಲರ್ ನಂಬರ ಸಿಟಿ ಡಬ್ಲ್ಯೂಯ 9573 ಅನ್ನು ಪೊಲೀಸರು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

ಆರೋಪಿಯ ಪರ ವಕೀಲರ ಪಾಟೀ ಸವಾಲಿನಲ್ಲಿ ತಮ್ಮ ಹಿಂದಿನ ಹೇಳಿಕೆಯನ್ನು ಬೆಂಬಲಿಸದೆ ಅಭಿಯೋಜನಾ ಪ್ರಕರಣಕ್ಕೆ ವಿರುದ್ಧವಾಗಿ ಉತ್ತರಿಸಿರುತ್ತಾರೆ.

**12.** ಅಭಿಯೋಜನೆಯು ಸಾಕ್ಷಿದಾರರಾದ ಚಾಸಾ-3/ವೀರಣ್ಣ ಮೇಟಿ ಇವರನ್ನು ಪ್ರಾಸಾ-3 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ನಿಪಿ-2 ಪಂಚನಾಮೆಯಾಗಿದ್ದು, ಅದರಲ್ಲಿ ತನ್ನ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ನಿಪಿ-3 ರಿಂದ 7

ಪಂಚನಾಮೆಯ ವೇಳೆಯಲ್ಲಿ ತೆಗೆದಿರುವ ಭಾವಚಿತ್ರಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಮೃತ ಮುತ್ತಪ್ಪನಿಗೆ ಅಪಘಾತವಾಗಿರುವುದರ ಬಗ್ಗೆ ಮಾಡಿರುತ್ತೇನೆ, ಸದರಿ ಸಹಿಯನ್ನು ಸುಮಾರು ಎರಡು ವರ್ಷದ ಹಿಂದೆ ಮಾಡಿರುತ್ತೇನೆ. ಸದರಿ ಭಾವಚಿತ್ರಗಳನ್ನು ಟ್ರೇಲರ್ ಪಲ್ಟಿಯಾದ ಜಾಗದಲ್ಲಿ ತೆಗೆದಿರುತ್ತಾರೆ. ನಂತರ ಘಟನಾ ಸ್ಥಳದಿಂದ ಟ್ರಾಕ್ಟರ ಮತ್ತು ಟ್ರೇಲರನ್ನು ಪೊಲೀಸರು ಜಪ್ತು ಮಾಡಿಕೊಂಡು ಸವಣೂರು ಪೊಲೀಸ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

ನಂತರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ರವರಿಂದ ಪಾಟೀ ಸವಾಲಿಗೆ ಒಳಪಟ್ಟಾಗ, ದಿಃ10-01-2022 ರಂದು ಮಧ್ಯಾಹ್ನ 14.30 ಗಂಟೆಯಿಂದ 15.30 ಗಂಟೆಯವರೆಗೆ ನಿಮ್ಮ ಮತ್ತು ಚಾಸಾ 2 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಜಾಗೆಯಲ್ಲಿ ಪೊಲೀಸರು ನಿಪಿ 2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆಯ ವೇಳೆಯಲ್ಲಿ ಅಪಘಾತಕ್ಕೆ ಒಳಗಾದ ಟ್ರಾಕ್ಟರ ನೊಂದಣಿ ಸಂಖ್ಯೆ ಕೆಎ 33 ಟಿ 2492 ಟ್ರೇಲರ್ ನಂಬರ ಸಿಟಿ ಡಬ್ಲ್ಯೂಯ 9573 ಅನ್ನು ಪೊಲೀಸರು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ವೇಳೆಯಲ್ಲಿ ಪೊಲೀಸರು ಭಾವಚಿತ್ರಗಳನ್ನು ಸಹ ತೆಗೆದುಕೊಂಡಿರುತ್ತಾರೆ ಎಂದರೆ ಸರಿ.

ಆರೋಪಿಯ ಪರ ವಕೀಲರ ಪಾಟೀ ಸವಾಲಿನಲ್ಲಿ ತಮ್ಮ ಹಿಂದಿನ ಹೇಳಿಕೆಯನ್ನು ಬೆಂಬಲಿಸದೆ ಅಭಿಯೋಜನಾ ಪ್ರಕರಣಕ್ಕೆ ವಿರುದ್ಧವಾಗಿ ಉತ್ತರಿಸಿರುತ್ತಾರೆ.

**13.** ಅಭಿಯೋಜನೆಯು ಸಾಕ್ಷಿದಾರರಾದ ಚಾಸಾ-4/ಜಾಫರಸಾಬ ಚೋಪದಾರ ಇವರನ್ನು ಪ್ರಾಸಾ-4 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು ಮೂರುವರೆ ವರ್ಷದ ಹಿಂದೆ ರಾತ್ರಿ ಹೊಲದಲ್ಲಿ ಮಲಗಿದಾಗ ರಾತ್ರಿ 01.00 ಗಂಟೆಗೆ ನೀರು

ಬರುತ್ತಿದ್ದ ಕಾರಣ, ಜೋರಾದ ಶಬ್ದ ಕೇಳಿ ನೋಡಿದಾಗ ಟ್ರಾಕ್ಟರ ಬಿದ್ದಿರುತ್ತದೆ. ಆ ವೇಳೆಯಲ್ಲಿ ಜನರು ಸೇರಿದ್ದರು, ಒಬ್ಬನು ಟ್ರಾಕ್ಟರ ಬಳಿ ಸಿಲುಕಿಕೊಂಡಿದ್ದಾನೆ ಎಂದು ತಿಳಿಯಿತು. ನಂತರ ಏನಾಯಿತು ಎಂದು ಕೇಳಿದಾಗ ಟ್ರಾಕ್ಟರನ ಹುಕ್ಕ ಕಟ್ಟಾಗಿ ಈ ಅಪಘಾತ ಆಗಿರುತ್ತದೆ ಎಂದು ತಿಳಿಯಿತು. ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲ. ರಸ್ತೆಯು ತಗ್ಗಿನಿಂದ ಕೂಡಿತ್ತು. ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯ ಮೇರೆಗೆ ಅವರನ್ನು ಪಾಟೀ ಸವಾಲು ಮಾಡಿದಾಗ, ಪ್ರಾಸಾ-4 ರವರು ಆರೋಪಿ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅವರು ನಿರಾಕರಿಸಿರುತ್ತಾರೆ.

ಆರೋಪಿಯ ಪರ ವಕೀಲರ ಪಾಟೀ ಸವಾಲಿನಲ್ಲಿಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ ಮತ್ತ ತಮ್ಮ ಹಿಂದಿನ ಹೇಳಿಕೆಯನ್ನು ಬೆಂಬಲಿಸದೆ ಅಭಿಯೋಜನಾ ಪ್ರಕರಣಕ್ಕೆ ವಿರುದ್ಧವಾಗಿ ಉತ್ತರಿಸಿರುತ್ತಾರೆ.

**14.** ಅಭಿಯೋಜನೆಯು ಸಾಕ್ಷಿದಾರರಾದ ಚಾಸಾ-6/ಸುನೀಲ @ ಸುನೀಲಕುಮಾರ ಲಮಾಣಿ ಇವರನ್ನು ಪ್ರಾಸಾ-5 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು ಎರಡೂವರೆ ವರ್ಷದ ಹಿಂದೆ ರಾತ್ರಿ ತಾನು ಊಟ ಮಾಡಿ ಮಲಗಿದ್ದಾಗ, ಎರಡು ಗಂಟೆ ಸುಮಾರಿಗೆ ನಮ್ಮ ಊರಿನ ಜನರು ಬಂದು ರಸ್ತೆಯಲ್ಲಿ ಟ್ರಾಕ್ಟರ ಟ್ರೇಲರ ಪಲ್ಟಿ ಯಾಗಿದ್ದು ಅದನ್ನು ಎತ್ತಬೇಕು ಅದಕ್ಕೆ ನೀವು ಜೆಸಿಬಿ ತೆಗೆದುಕೊಂಡು ಬರಬೇಕು ಎಂದು ಕೇಳಿಕೊಂಡರು. ನಂತರ ತಾನು ಜೆಸಿಬಿ ತೆಗೆದುಕೊಂಡು ಸ್ಥಳಕ್ಕೆ ಹೋದೆನು ಅಲ್ಲಿ ಟ್ರಾಕ್ಟರ ಟ್ರೇಲರ ಹುಕ್ಕ ಕಟ್ಟಾಗಿ ಪಲ್ಟಿಯಾಗಿ ಬಿದ್ದಿತ್ತು. ನಂತರ ಸದರಿ ಟ್ರಾಕ್ಟರ ಟ್ರೇಲರನ್ನು ಎತ್ತಿ ನಾನು ಮನೆಗೆ ಹಿಂತಿರುಗಿದೆನು. ಈ ಅಪಘಾತವು ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲ. ಅಪಘಾತದ ವೇಳೆಯಲ್ಲಿ ರಸ್ತೆ

ತಗ್ಗಿನಿಂದ ಕೂಡಿತ್ತು. ಪೋಲಿಸರ ಮುಂದು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯ ಮೇರೆಗೆ ಅವರನ್ನು ಪಾಟೀ ಸವಾಲು ಮಾಡಿದಾಗ, ಪ್ರಾಸಾ-5 ರವರು ಆರೋಪಿ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅವರು ನಿರಾಕರಿಸಿರುತ್ತಾರೆ.

**15.** ಅಭಿಯೋಜನೆಯು ಸಾಕ್ಷಿದಾರರಾದ ಚಾಸಾ-5/ಹನಮಂತಪ್ಪ @ ಜಾನಿ ಹಾವೇರಿ ಇವರನ್ನು ಪ್ರಾಸಾ-6 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇರುವುದಿಲ್ಲ. ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ತಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯ ಮೇರೆಗೆ ಅವರನ್ನು ಪಾಟೀ ಸವಾಲು ಮಾಡಿದಾಗ, ಪ್ರಾಸಾ-6 ರವರು ಆರೋಪಿ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅವರು ನಿರಾಕರಿಸಿರುತ್ತಾರೆ.

**16.** ಅಭಿಯೋಜನೆಯು ಚಾಸಾ-9/ಪ್ರಭುಸ್ವಾಮಿ ಹಿರೇಮಠ ಇವರನ್ನು ಪ್ರಾಸಾ-7 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ 03-01-2022 ರಂದು ಸವಣೂರ ಪೋಲಿಸ ಠಾಣೆಯಿಂದ ಮನವಿಯನ್ನು ಸ್ವೀಕರಿಸಿದೆವು. ಅದೇ ದಿನ ಸಂಜೆ 5.20 ಗಂಟೆ ಸುಮಾರಿಗೆ ಸವಣೂರ ಪೋಲಿಸ ಠಾಣೆಯ ಅವರಣದಲ್ಲಿ ಟ್ರಾಕ್ಟರ ಕೆಎ- 33/ಟಿ -2492 ಮತ್ತು ಟ್ರೇಲರ್ ಸಿ ಟಿಡಬ್ಲೂ - 9573 ನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಿದೆವು.

ಈ ಅಪಘಾತವು ವಾಹನದ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ವರದಿಯನ್ನು ಸಲ್ಲಿಸಿರುತ್ತೇನೆ. ವಾಹನದ ಬ್ರೇಕ ಸುಸ್ಥಿತಿಯಲ್ಲಿ ಇದ್ದವು. ಸದರಿ

ವರದಿಯನ್ನು ನಿಪಿ- 15 ಎಂದು ಮತ್ತು ಅದರಲ್ಲಿ ತನ್ನ ಸಹಿಯನ್ನು 15(ಎ) ಎಂದು ಗುರುತಿಸಲಾಯಿತು. ಟ್ರಾಕ್ಟರಗೆ ಜೋಡಿಸಿದ ಟ್ರೇಲರ್ ನಿಯಂತ್ರಣ ತಪ್ಪಿ ಪಲ್ಟಿಯಾದಾಗ ಟ್ರೇಲರಗೆ ಈ ರೀತಿಯ ಜಖಂ ಆಗುವ ಸಾಧ್ಯತೆಗಳು ಇದೆ ಎಂದು ನುಡಿದಿರುತ್ತಾರೆ.

ನಂತರ ಆರೋಪಿ ಪರ ವಕೀಲರಿಂದ ಪಾಟೀ ಸವಾಲಿಗ ಒಳಪಟ್ಟಾಗ, ಟ್ರೇಲರ ಎಷ್ಟು ವರ್ಷ ಹಳೆಯದು ಎಂದರೆ ದಾಖಲೆಯನ್ನು ನೋಡಿ ಹೇಳಬೇಕು ಅಂದಾಜಾಗಿ 20-25 ವರ್ಷದ ಹಿಂದಿನ ಹಳೆಯ ಟ್ರೇಲರ ಆಗಿರುತ್ತದೆ. ಹಳೆಯ ಟ್ರೇಲರ ಆಗಿರುವುದರಿಂದ ಅದರ ಹುಕ್ಕ ಸವೆದಿರುತ್ತದೆ ಎಂದರೆ ಸರಿ. ಮುಂದುವರೆದು ಅದನ್ನು ಕಾಲಕಾಲಕ್ಕೆ ಸರಿಪಡಿಸಿ ಆರ್ ಟಿ ಓ ಅಧಿಕಾರಿಗಳಿಂದ ಪರವಾನಿಗೆ ಪಡೆಯಬೇಕು. ರಸ್ತೆ ತಗ್ಗು ದಿನ್ನೆ ಇದ್ದಾಗ ಮತ್ತು ಅದರ ಮೇಲೆ ಹೆಚ್ಚಾದ ಭಾರವನ್ನು ಹಾಕಿದಾಗ ಹುಕ್ಕಾ ಕಟ್ಟಾಗುವ ಸಾಧ್ಯತೆಗಳು ಇವೆ ಎಂದರೆ ಸಾಧ್ಯತೆಗಳು ಇವೆ ಎಂದು ನುಡಿಯುತ್ತಾರೆ. ಹುಕ್ಕಾ ಸವೆದಿದ್ದಾಗ ಮತ್ತು ರಸ್ತೆಯು ತಗ್ಗು ದಿನ್ನೆ ಇದ್ದಾಗ ಈ ರೀತಿಯ ಅಪಘಾತಗಳು ಆಕಸ್ಮಿಕವಾಗಿ ಆಗುವ ಸಾಧ್ಯತೆ ಇದೆ ಎಂದರೆ ಆಗಬಹುದು ಆದರೆ ಚಾಲಕನು ಜಾಗರುಕತೆಯಿಂದ ವಾಹನವನ್ನು ಚಲಾಯಿಸಬೇಕಾಗಿರುತ್ತದೆ. ನೀವು ಅಪಘಾತ ಸ್ಥಳಕ್ಕೆ ಏನಾದರೂ ಹೋಗಿ ಪರಿಶೀಲನೆ ಮಾಡಿದ್ದೀರಾ ಎಂದರೆ ಇಲ್ಲ, ಮುಂದುವರೆದು ವಾಹನವು ಠಾಣಾ ಆವರಣದಲ್ಲಿ ಇದದ್ದರಿಂದ ಅಲ್ಲಿಯೇ ಪರಿಶೀಲನೆ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

**17.** ಅಭಿಯೋಜನೆಯು ಚಾಸಾ-10/ಬೀರಪ್ಪ ಲಮಾಣಿ ಇವರನ್ನು ಪ್ರಾಸಾ-8 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ 10-01-2022 ರಂದು ಚಾಸಾ- 12 ರವರು ತನ್ನನ್ನು ಅವರ ಜೊತೆಯಲ್ಲಿ ಯಲವಿಗಿ ಗ್ರಾಮವನ್ನು ದಾಟಿ 200 ಮೀಟರ ಹೊರಕ್ಕೆ ಅಂತರದಲ್ಲಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಘಟನಾ ಪಂಚನಾಮೆಯನ್ನು ಮದ್ಯಾಹ್ನ 2.30 ರಿಂದ 3.00 ಗಂಟೆಯವರೆಗೆ ಚಾಸಾ- 2 ಮತ್ತು 3 ರವರ ಸಮಕ್ಷಮ

ಚಾಸಾ- 1 ರವರು ತೋರಿಸಿದ ಜಾಗೆಯಲ್ಲಿ ನಿಪಿ-2 ಪಂಚನಾಮೆಯನ್ನು ಮಾಡಿದ್ದು ಸದರಿ ಪಂಚನಾಮೆಯನ್ನು ದಸ್ತುರಾಗಿ ತಾನು ಬರೆದಿರುತ್ತೇನೆ. ಅದರಲ್ಲಿ ತನ್ನ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ನಿಪಿ-3 ರಿಂದ 7 ನಾಲ್ಕು ಭಾವಚಿತ್ರಗಳಲ್ಲಿ ತಾನು ಇರುತ್ತೇನೆ.

ಸದರಿ ಪಂಚನಾಮೆ ವೇಳೆಯಲ್ಲಿಯೇ ಟ್ಯಾಕ್ಟರ ನಂ. ಕೆಎ- 33 ಟಿ- 2492 ಮತ್ತು ಟ್ರೇಲರ ಸಿ ಟಿ ಡಬ್ಲೂ-9573 ನ್ನು ಪಂಚನಾಮೆ ಮಾಡಿ ವಾಹನವನ್ನು ಜಪ್ತ ಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ.

ನಂತರ ಆರೋಪಿ ಪರ ವಕೀಲರಿಂದ ಪಾಟೀ ಸವಾಲಿಗ ಒಳಪಟ್ಟಾಗ, ಅಪಘಾತವಾದ ಸ್ಥಳದಲ್ಲಿ ರಸ್ತೆಯು ತಗ್ಗು ದಿನ್ನೆ ಇಂದ ಕೂಡಿತ್ತು ಎಂದರೆ ಸರಿ. ಟ್ರಾಕ್ಟರನ ಹುಕ್ಕಾ ಕಟ್ಟಾಗಿತ್ತು ಎಂದರೆ ಸರಿ. ಪಂಚನಾಮೆಯನ್ನು ನೀವು ಬರೆದಿಟ್ಟು ಅದರ ಮೇಲೆ ಸಾಕ್ಷಿಯ ಸಹಿಯನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ಮುಂದುವರೆದು ಘಟನಾ ಸ್ಥಳದಲ್ಲಿಯೇ ಪಂಚನಾಮೆಯನ್ನು ಬರೆದಿರುತ್ತೇವೆ. ಆಕಸ್ಮಿಕವಾಗಿ ನಡೆದ ಘಟನೆಯಾಗಿದ್ದರು ಸಹ ಪಿರ್ಯಾಧಿಗೆ ವಿಮಾ ಸೌಲಭ್ಯ ಸಿಗುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಯಾರು ನಿಮಗೆ ಹೇಳಿ ಬರೆಸಿರುವುದಿಲ್ಲ, ನೀವೆ ಅದನ್ನು ಬರೆದಿಟ್ಟು ಸಾಕ್ಷಿಧಾರರ ಸಹಿಯನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

**18.** ಅಭಿಯೋಜನೆಯು ಚಾಸಾ-12/ಎಸ್ ಎಚ್ ಶಿವಣ್ಣನವರ ಇವರನ್ನು ಪ್ರಾಸಾ-9 ರವರನ್ನಾಗಿ ವಿಚಾರಣೆ ಮಾಡಿದಾಗ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 10-01-2022 ರಂದು ತಾನು ಠಾಣೆಯಲ್ಲಿದ್ದಾಗ ಚಾಸಾ- 1 ರವರು ಹಾಜರಾಗಿ ಗಣಕೀಕೃತ ನಿಪಿ-1 ಫಿರ್ಯಾದಿಯನ್ನು ಸಲ್ಲಿಸಿದರು ಅದನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ 1/2022

ನ್ನು ದಾಖಲಿಸಿಕೊಂಡು ನಿಪಿ-17 ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಮೃತ ಮುತ್ತಪ್ಪ ತಂದೆ ವೀರಪ್ಪ ಉಳ್ಳಾಗಡ್ಡಿ ರವರ ಶವ ಪಂಚನಾಮೆಯನ್ನು ಚಾಸಾ- 2 ಮತ್ತು 3 ರವರ ಸಮಕ್ಷಮ ನಿಪಿ-8 ರಂತೆ ಮಾಡಿರುತ್ತೇವೆ. ನಿಪಿ-13 ಮತ್ತು 14 ಆ ವೇಳೆಯಲ್ಲಿ ತೆಗೆದ ಭಾವ ಚಿತ್ರಗಳು. ಅದೇ ದಿನ ಚಾಸಾ- 2 ಮತ್ತು 3 ರವರ ಸಮಕ್ಷಮ ಚಾಸಾ- 1 ರವರು ತೋರಿಸಿದ ಜಾಗೆಯಲ್ಲಿ ನಿಪಿ- 2 ರಂತೆ ಪಂಚನಾಮೆಯನ್ನು ಮಾಡಿರುತ್ತೇವೆ. ಆ ವೇಳೆಯಲ್ಲಿ ನಿಪಿ-3 ರಿಂದ 7 ಭಾವ ಚಿತ್ರಗಳನ್ನು ತೆಗೆದಿರುತ್ತಾರೆ ಮತ್ತು ಟ್ರಾಕ್ಟರ ಮತ್ತು ಟ್ರೇಲರನ್ನು ಜಪ್ತಪಡಿಸಿಕೊಂಡಿರುತ್ತೇವೆ. ಒಂದು ಸಿಡಿಯನ್ನು ನಿಪಿ- 18 ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ.

ನಂತರ ಆರೋಪಿ ಪರ ವಕೀಲರಿಂದ ಪಾಟೀ ಸವಾಲಿಗ ಒಳಪಟ್ಟಾಗ, ಪಂಚನಾಮೆ ಭಾವ ಚಿತ್ರಗಳಲ್ಲಿ ಸಾಕಷ್ಟು ತಗ್ಗುದಿನ್ನೆಗಳು ಇವೆ ಎಂದರೆ ಸರಿ. ಸದರಿ ಅಪಘಾತವು ಟ್ರೇಲರನ ಹುಕ್ಕ ಕಟ್ಟ ಆಗಿದ್ದರಿಂದ ಆಗಿರುತ್ತದೆ ಎಂದರೆ ಸರಿ. ಅಪಘಾತವಾದ ವೇಳೆಯಲ್ಲಿ ರಸ್ತೆ ಕೆಟ್ಟಿತ್ತು ಎಂದರ ಡಾಂಬರ ರಸ್ತೆ ಕೆಟ್ಟಿತ್ತು. ಆಕಸ್ಮಿಕವಾಗಿ ಹುಕ್ ಕಟ್ಟಾಗಿ ಈ ಘಟನೆ ಆಗಿರುತ್ತದೆ ಎಂದರೆ ಸರಿಯಲ್ಲ. ರಸ್ತೆಯು ತಗ್ಗು ದಿನ್ನೆಯಿಂದ ಕೂಡಿದ್ದು ವಾಹನಗಳು ವೇಗವಾಗಿ ಓಡಿಸಲು ಸಾಧ್ಯವಿಲ್ಲ ಎಂದರೆ ಒಬ್ಬಬ್ಬೊರು ವೇಗವಾಗಿ ಓಡಿಸಿರುತ್ತಾರೆ. ಅಪಘಾತವಾದ ಸ್ಥಳವು ಎಲ್ ಆಕಾರದಲ್ಲಿ ತಿರುವು ಇದೆ ಎಂದರೆ ಸರಿ. ರಸ್ತೆ ಸರಿ ಇಲ್ಲದೇ ಇದ್ದ ಕಾರಣ ಆಕಸ್ಮಿಕವಾಗಿ ಹುಕ್ ಕಟ್ಟಾಗಿದ್ದರಿಂದ ಈ ಘಟನೆ ಸಂಭವಿಸಿರುತ್ತದೇ ಹೊರತು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸದರಿ ವಾಹನವನ್ನು ಜೋರಾಗಿ ಓಡಿಸಿರುತ್ತಿರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾಧಿಗೆ ಪರಿಹಾರ ಸಿಗುವಹಾಗೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ.

**19.** ಅಭಿಯೋಜನೆ ಪರ ಹಾಜರುಪಡಿಸಿದ ಎಲ್ಲಾ ಸಾಕ್ಷಿದಾರರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿ, ಅಭಿಯೋಜನೆಯ ಪ್ರಕರಣದ ಪ್ರಕಾರ, ಆರೋಪಿ ಟ್ರಾಕ್ಟರ್ ಅನ್ನು ಅತಿವೇಗ ಹಾಗೂ ನಿರ್ಲಕ್ಷ್ಯದಿಂದ ಚಲಾಯಿಸಿದ್ದರಿಂದ ಟ್ರೇಲರ್ ಪಲ್ಟಿಯಾಗಿ, ಅದರಲ್ಲಿ ಪ್ರಯಾಣಿಸುತ್ತಿದ್ದ ಮುತ್ತಪ್ಪನಿಗೆ ಮಾರಣಾಂತಿಕ ಗಾಯಗಳಾಗಿ ಮೃತಪಟ್ಟಿದ್ದಾನೆ ಎಂದು ಆರೋಪಿಸಲಾಗಿದೆ. ಈ ಆರೋಪವನ್ನು ಸಂಶಯಾತೀತವಾಗಿ ಸಾಬೀತುಪಡಿಸುವ ಹೊಣೆ ಸಂಪೂರ್ಣವಾಗಿ ಅಭಿಯೋಜನೆಯ ಮೇಲಿದೆ.

**20.** ಪ್ರಮುಖ ಪ್ರತ್ಯಕ್ಷ ಸಾಕ್ಷಿದಾರನಾದ ಪ್ರಾಸಾ-1 ತನ್ನ ಸಾಕ್ಷ್ಯದಲ್ಲಿ ಟ್ರಾಕ್ಟರ್ ಹುಕ್ ಕಟ್ ಆಗಿದ್ದರಿಂದ ಟ್ರೇಲರ್ ಪಲ್ಟಿಯಾಯಿತು ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಅಪಘಾತವು ಯಾರ ತಪ್ಪಿನಿಂದ ಸಂಭವಿಸಿತು ಎಂದು ತನಗೆ ತಿಳಿದಿಲ್ಲ ಎಂದು ಹೇಳಿದ್ದು, ಆರೋಪಿಯು ಅತಿವೇಗ ಅಥವಾ ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದನೆಂಬುದನ್ನು ಬೆಂಬಲಿಸಿಲ್ಲ. ನಂತರದ ಪಾಟೀಸವಾಲಿನಲ್ಲಿಯೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಅನುಕೂಲವಾಗುವ ಯಾವುದೇ ಹೇಳಿಕೆ ನೀಡಿಲ್ಲ. ಪ್ರಾಸಾ-2 ಮತ್ತು ಪ್ರಾಸಾ-3 ಪಂಚನಾಮೆ ಸಾಕ್ಷಿಗಳಾಗಿದ್ದು, ಅವರು ಅಪಘಾತವನ್ನು ಕಣ್ಣಾರೆ ನೋಡಿದ ಸಾಕ್ಷಿಗಳಲ್ಲ. ಅವರ ಸಾಕ್ಷ್ಯದಿಂದ ಅಪಘಾತದ ಕಾರಣ ಅಥವಾ ಆರೋಪಿಯ ನಿರ್ಲಕ್ಷ್ಯ ಸಾಬೀತಾಗುವುದಿಲ್ಲ. ಪ್ರಾಸಾ-4, ಪ್ರಾಸಾ-5 ಮತ್ತು ಪ್ರಾಸಾ-6 ರವರು ಸಹ ಅಪಘಾತ ಹೇಗೆ ಸಂಭವಿಸಿತು ಎಂಬ ಬಗ್ಗೆ ತಿಳಿದಿಲ್ಲ ಎಂದು ಹೇಳಿದ್ದು, ಅವರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿಲ್ಲ. ಪಾಟೀಸವಾಲಿನಲ್ಲಿಯೂ ಆರೋಪಿಯ ವಿರುದ್ಧ ಯಾವುದೇ ಅಪರಾಧಕಾರಿ ಅಂಶವನ್ನು ಒಪ್ಪಿಕೊಂಡಿಲ್ಲ.

**21.** ಮೋಟಾರು ವಾಹನ ನಿರೀಕ್ಷಕರಾದ ಪ್ರಾಸಾ-7 ರವರು ವಾಹನದಲ್ಲಿ ಯಾಂತ್ರಿಕ ದೋಷವಿಲ್ಲ ಎಂದು ವರದಿ ನೀಡಿದ್ದರೂ, ಪಾಟೀಸವಾಲಿನಲ್ಲಿ ಟ್ರೇಲರ್ ಸುಮಾರು 20-25 ವರ್ಷ ಹಳೆಯದಾಗಿದ್ದು, ಅದರ ಹುಕ್ ಸವೆದಿದ್ದರೆ ಹಾಗೂ ರಸ್ತೆ ತಗ್ಗು-ದಿಣ್ಣೆಯಾಗಿದ್ದು ಹೆಚ್ಚಿನ

ಭಾರವಿದ್ದರೆ ಹುಕ್ ಕಟ್ ಆಗುವ ಸಾಧ್ಯತೆ ಇದೆ ಎಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಅಪಘಾತವು ಕೇವಲ ಆರೋಪಿಯ ನಿರ್ಲಕ್ಷ್ಯದಿಂದಲೇ ಸಂಭವಿಸಿದೆ ಎಂದು ನಿರ್ಣಯಿಸಲು ಸಾಧ್ಯವಾಗುವುದಿಲ್ಲ.

**22.** ಪ್ರಾಸಾ-8 ಮತ್ತು ಪ್ರಾಸಾ-9 ತನಿಖಾಧಿಕಾರಿಗಳಾಗಿದ್ದು, ಅವರ ಸಾಕ್ಷ್ಯವು ತನಿಖೆಯ ಕ್ರಮವನ್ನು ಮಾತ್ರ ತೋರಿಸುತ್ತದೆ. ತನಿಖಾಧಿಕಾರಿಗಳ ಅಭಿಪ್ರಾಯ ಮಾತ್ರದಿಂದ ಆರೋಪಿಯ ಅಪರಾಧ ಸಾಬೀತಾಗುವುದಿಲ್ಲ. ಮೇಲಾಗಿ, ಅವರ ಪಾಟೀಸವಾಲಿನಲ್ಲಿ ಅಪಘಾತ ನಡೆದ ಸ್ಥಳದಲ್ಲಿ ರಸ್ತೆ ತಗ್ಗು-ದಿಣ್ಣೆಯಾಗಿತ್ತು, ಟ್ರೇಲರ್ ಹುಕ್ ಕಟ್ ಆಗಿತ್ತು ಹಾಗೂ ತಿರುವು ಇದ್ದುದನ್ನು ಒಪ್ಪಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಯಾವುದೇ ವಿಶ್ವಾಸಾರ್ಹ ಪ್ರತ್ಯಕ್ಷ ಸಾಕ್ಷಿದಾರನು ಆರೋಪಿಯು ಅತಿವೇಗ ಅಥವಾ ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದಾನೆ ಎಂದು ಹೇಳಿಲ್ಲ. ಕೇವಲ ಅಪಘಾತ ಸಂಭವಿಸಿರುವುದು ಅಥವಾ ವ್ಯಕ್ತಿಯೊಬ್ಬನು ಮೃತಪಟ್ಟಿರುವುದರಿಂದ ಮಾತ್ರ ಭಾರತೀಯ ದಂಡ ಸಂಹಿತೆ ಕಲಂ 279 ಹಾಗೂ 304(ಎ) ರ ಅಪರಾಧ ಸಾಬೀತಾದಂತಾಗುವುದಿಲ್ಲ. ಅಪಘಾತಕ್ಕೆ ಆರೋಪಿಯ ನಿರ್ಲಕ್ಷ್ಯವೇ ನೇರ ಕಾರಣ ಎಂಬುದನ್ನು ಅಭಿಯೋಜನೆಯು ದೃಢವಾದ ಸಾಕ್ಷ್ಯದಿಂದ ಸಾಬೀತುಪಡಿಸಬೇಕಾಗುತ್ತದೆ. ಇದಕ್ಕೆ ವಿರುದ್ಧವಾಗಿ, ದಾಖಲೆಯಲ್ಲಿರುವ ಸಾಕ್ಷ್ಯಗಳಿಂದ ಟ್ರೇಲರ್‌ನ ಹುಕ್ ಕಟ್ ಆಗಿರುವುದು, ರಸ್ತೆ ತಗ್ಗು-ದಿಣ್ಣೆಯಾಗಿರುವುದು ಹಾಗೂ ವಾಹನದ ಮೇಲಿದ್ದ ಭಾರದ ಕಾರಣದಿಂದ ಅಪಘಾತ ಸಂಭವಿಸಿರುವ ಸಾಧ್ಯತೆಗಳು ಕಂಡುಬರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಆರೋಪಿಯ ಅಪರಾಧವು ಸಂಶಯಾತೀತವಾಗಿ ಸಾಬೀತಾಗಿದೆ ಎಂದು ಹೇಳಲಾಗುವುದಿಲ್ಲ.

**23.** ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ) ಅಡಿಯಲ್ಲಿ ದೋಷಾರೋಪಣೆ ಮಾಡಲು ಅತಿಜೋರು ಅಥವಾ ನಿರ್ಲಕ್ಷ್ಯತೆ ಎಂಬ ಅಂಶಗಳು ಸ್ಪಷ್ಟವಾಗಿ

ಮತ್ತು ಸಂಶಯಾತೀತವಾಗಿ ರುಜುವಾತಾಗಬೇಕಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಆರೋಪಿಯು ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಅತೀಜೋರು ಹಾಗೂ ನಿರ್ಲಕ್ಷ್ಯತನದಿಂದ ವಾಹನ ಚಲಾಯಿಸಿದ್ದಾನೆ ಎಂಬುದಕ್ಕೆ ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಬೇಕು. ಅಪಘಾತ ನಡೆದಿರುವುದು, ಮರಣ ಹೊಂದಿರುವುದು ನಿಸ್ಸಂಶಯವಾದರೂ, ಅದು ಆರೋಪಿಯ ನಿರ್ಲಕ್ಷ್ಯ ಅಥವಾ ಅಜಾಗರೂಕ ಚಾಲನೆಯಿಂದ ಸಂಭವಿಸಿದೆ ಎಂಬುದನ್ನು ಅಭಿಯೋಜನೆಯು ಯಥಾವತ್ತಾಗಿ ಸಾಬೀತುಪಡಿಸಲು ವಿಫಲವಾಗಿದೆ. ಇದರಿಂದ, ಅಭಿಯೋಜನೆಯ ಪರ ಸಾಕ್ಷಿಗಳು ನೀಡಿದ ಸಾಕ್ಷ್ಯಾದಾರಗಳನ್ನು ಪರಿಶೀಲಿಸಲಾಗಿ, ಆರೋಪಿಯು ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ. 279 ಮತ್ತು 304(ಎ) ರಡಿಯಲ್ಲಿ ಅಪರಾಧವನ್ನು ಎಸಗಿದ್ದಾನೆ ಎಂದು ಸಾಬೀತುಪಡಿಸಲು ವಿಫಲರಾಗಿರುತ್ತಾರೆ. ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಬೇಕಾಗುತ್ತದೆ. ಎಲ್ಲಿಯೇ ಒಂದು ಸಂಶಯ ಉಂಟಾದಲ್ಲಿ ಅದರ ಲಾಭವನ್ನು ಆರೋಪಿಗೆ ನೀಡಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಯಾವುದೇ ಬಲವಾದ ಹಾಗೂ ಸಮರ್ಪಕವಾದ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ ಹಾಗಾಗಿ ಆರೋಪಿಯು ಅಪರಾಧವನ್ನು ಎಸಗಿದ್ದಾನೆ ಎಂದು ಅಭಿಪ್ರಾಯ ಪಡಲು ಆಗುವುದಿಲ್ಲ ಮತ್ತು ಸಂಶಯದ ಲಾಭವನ್ನು ಆರೋಪಿಗೆ ನೀಡುತ್ತಾ, ಆರೋಪಿಯು ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ. 279 ಮತ್ತು 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾನೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ ಎಂದು ಪರಿಗಣಿಸಿ, ***ಮೇಲ್ಕಂಡ 1 ಮತ್ತು 2 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ .***

**24. ಅಂಶ ಸಂಖ್ಯೆ :3** : - ಅಂಶ-1 ಮತ್ತು 2 ರಲ್ಲಿ ವಿವರಿಸಿದ ವಸ್ತುಸ್ಥಿತಿ ಹಾಗೂ ಕಾರಣಗಳ ಆಧಾರದ ಮೇಲೆ, ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## **ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ. 255(1) ರನ್ವಯ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ. 279 ಮತ್ತು 304(ಎ) ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಸೆಕ್ಷನ್ 437(ಎ) ಸಿ.ಆರ್.ಪಿ.ಸಿ ರಡಿಯಲ್ಲಿ ಆರೋಪಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಇಂದಿನಿಂದ ಆರು ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಆರೋಪಿ ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ರದ್ದುಪಡಿಸಲಾಗಿದೆ.

*(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟಿದ್ದು, ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ 3 ನೇ ಆಗಸ್ಟ, 2026 ರಂದು ಘೋಷಿಸಿದ್ದೇನೆ. )*

SRINIVASA S N
Digitally signed by SRINIVASA S N
Date: 2026.08.03 18:35:50 +0530

(ಶ್ರೀನಿವಾಸ. ಎಸ್.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ.ಗಳು,
ಸವಣೂರ

## *** ಅನುಬಂಧ ***

1. **ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ** -

| | |
|---|---|
| ಪ್ರಾಸಾ-1: | ಸುನೀಲ ನಾಗಾವಿ |
| ಪ್ರಾಸಾ-2: | ಚನ್ನಬಸನಗೌಡ ಹೊಸಮನಿ |
| ಪ್ರಾಸಾ-3: | ವೀರಣ್ಣ ಮೇಟಿ |
| ಪ್ರಾಸಾ-4: | ಜಾಫರಸಾಬ ಚೋಪದಾರ |
| ಪ್ರಾಸಾ-5: | ಸುನೀಲ @ ಸುನೀಲಕುಮಾರ ಲಮಾಣಿ |

| | |
|---|---|
| ಪ್ರಾಸಾ-6: | ಹನಮಂತಪ್ಪ @ ಜಾನಿ ಹಾವೇರಿ |
| ಪ್ರಾಸಾ-7: | ಪ್ರಭುಸ್ವಾಮಿ ಹಿರೇಮಠ |
| ಪ್ರಾಸಾ-8: | ಬೀರಪ್ಪ ಲಮಾಣಿ |
| ಪ್ರಾಸಾ-9: | ಎಸ್ ಎಚ್ ಶಿವಣ್ಣನವರ |

2. **ಅಭಿಯೋಜನೆಯ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಪಟ್ಟಿಃ** -

| | |
|---|---|
| ನಿಪಿ-1: | ದೂರು |
| ನಿಪಿ-1(ಎ): | ಪ್ರಾಸಾ-1 ರವರ ಸಹಿ |
| ನಿಪಿ-1(ಬಿ): | ಪ್ರಾಸಾ-9 ರವರ ಸಹಿ |
| ನಿಪಿ-2: | ಅಪರಾಧ ವಿವರ ನಮೂನೆ |
| ನಿಪಿ-2(ಎ): | ಪ್ರಾಸಾ-1 ರವರ ಸಹಿ |
| ನಿಪಿ-2(ಬಿ): | ಪ್ರಾಸಾ-2 ರವರ ಸಹಿ |
| ನಿಪಿ-2(ಸಿ): | ಪ್ರಾಸಾ-3 ರವರ ಸಹಿ |
| ನಿಪಿ-2(ಡಿ): | ಪ್ರಾಸಾ-8 ರವರ ಸಹಿ |
| ನಿಪಿ-2(ಇ): | ಪ್ರಾಸಾ-9 ರವರ ಸಹಿ |
| ನಿಪಿ-3 ರಿಂದ 7: | 5 ಪೋಟೊಗಳು |
| ನಿಪಿ-8: | ಶವ ತನಿಖಾ ವರದಿ |
| ನಿಪಿ-8(ಎ): | ಪ್ರಾಸಾ-9 ರವರ ಸಹಿ |
| ನಿಪಿ-9 : | ಪ್ರಾಸಾ-4 ರವರ ಹೇಳಿಕೆ |
| ನಿಪಿ-10: | ಪ್ರಾಸಾ-5 ರವರ ಹೇಳಿಕೆ |
| ನಿಪಿ-11: | ಪ್ರಾಸಾ-6 ರವರ ಹೇಳಿಕೆ |
| ನಿಪಿ-12: | ಮರಣೋತ್ತರ ಪರೀಕ್ಷಾ ವರದಿ |
| ನಿಪಿ-13 ಮತ್ತು 14: | 2 ಪೋಟೊಗಳು |
| ನಿಪಿ-13(ಎ): | ಪ್ರಾಸಾ-9 ರವರ ಸಹಿ |

| | |
|---|---|
| ನಿಪಿ-15: | ಮೋಟಾರು ವಾಹನ ಅಪಘಾತ ವರದಿ |
| ನಿಪಿ-15(ಎ): | ಪ್ರಾಸಾ-7 ರವರ ಸಹಿ |
| ನಿಪಿ-16: | 65-ಬಿ ದೃಢೀಕರಣ ಪತ್ರ |
| ನಿಪಿ-17: | ಪ್ರಥಮ ವರ್ತಮಾನ ವರದಿ |
| ನಿಪಿ-17(ಎ): | ಪ್ರಾಸಾ-9 ರವರ ಸಹಿ |
| ನಿಪಿ-18: | ಸಿ.ಡಿ |

**3. ಅಭಿಯೋಜನೆಯ ಪರವಾಗಿ ಗುರುತಿಸಿರುವ ಮುದ್ದೆಮಾಲು ಪಟ್ಟಿ:-** - ಇಲ್ಲ -

**4. ಆರೋಪಿ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ :-** - ಇಲ್ಲ -

**5. ಆರೋಪಿ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಪಟ್ಟಿ :** - ಇಲ್ಲ -

(ಶ್ರೀನಿವಾಸ. ಎಸ್,ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ.ಗಳು,
ಸವಣೂರ